ಡಿ.ಟಿ. ಸಾಹೇಬ್ರು ಸೇರಿ ಆ ಊರಿನ ಗೌಡನಿಗೆ ಪಾರಿಕತ್ತು ಮಾಡಲು ಗುಟ್ಟಾಗಿ ತಯಾರಿ ನಡೆದಿದ್ದನ್ನು ಕರಿಯಪ್ಪ ಅರುಹಿದ್ದ. ವಿಷಯ ತಿಳಿದ ಕಾಂತ ಮತ್ತಷ್ಟು ಕನಲಿದ. ಆ ಫೈಲ್ ತನ್ನ ಬಳಿ ಇದ್ದಿದ್ದರೇ ಇಷ್ಟೊತ್ತಿಗೆ ರೆಕಾರ್ಡ್ ರೂಮಿನಲ್ಲಿ ಹಳೆಯ ಪಹಣಿ, ಸಾಗುವಳಿ ಪತ್ರ ಹುಡುಕಿ ಮತ್ತೊಮ್ಮೆ ಸರ್ವೆ ಮಾಡಿಸಿ ಆ ಈರಮ್ಮಜ್ಜಿಯ ಹೆಸರಿಗೆ ಹದ್ದುಬಸ್ತು ಮಾಡಿಸಿಕೊಡಬಹುದಿತ್ತು. ಆದರೆ ಅದು ಆ ರುದ್ರಮೂರ್ತಿಯ ಹತ್ರ ಇದ್ದುದ್ದು ಕಾಂತನ ವ್ಯಾಪ್ತಿ ಮೀರಿದ್ದಾಗಿತ್ತು.

ಏನಾದರೂ ಮಾಡಿ ಆ ಫೈಲ್ ಅನ್ನು ತನ್ನ ಟೇಬಲ್ಲಿಗೆ ಬರುವಂತಾದರೂ ಮಾಡಬೇಕೆಂದು ಏನೇನೋ ತಂತ್ರಗಳನ್ನು ಹೊಸೆದು ನೋಡಿದ. ರುದ್ರಮೂರ್ತಿ ಬ್ಯುಸಿ ಇರುವ ಸಮಯಕ್ಕೆ ಕಾದು, ಸಿಕ್ಕ ಅವಕಾಶದಲ್ಲಿ ಪ್ಯೂನ್ ಕರಿಯಪ್ಪನನ್ನು ಕರೆಸಿ ಅವನಿಂದ ಆ ಫೈಲ್ ತರಲು ಕಳಿಸಿದ. ಆದರೆ ರುದ್ರಮೂರ್ತಿ ಅದಕ್ಕೆ ಸೊಪ್ಪು ಹಾಕಲಿಲ್ಲ. 'ಅವನ್ಯಾರು ನನ್ನ ಫೈಲ್ ಅಟೆಂಡ್ ಮಾಡಕ್ಕೆ' ಎಂದು ಏಕವಚನದಲ್ಲಿ ಹೇಳಿ ಕಳಿಸಿದ್ದ. ಇದರಿಂದ ಕಾಂತನಿಗೆ ಮತ್ತಷ್ಟು ರೇಗಿಹೋಯಿತು. ಯಾವಾಗ ಕಾಂತ ಈರಮ್ಮಜ್ಜಿ ಫೈಲ್ ಮೇಲೆ ಕಾಳಜಿ ತೋರಿಸಿದನೋ ಆಗಿನಿಂದ ಮೂರ್ತಿಗೆ ಹಿಂದಿನದೆಲ್ಲಾ ಕಣ್ಮುಂದೆ ಹಾದು ಹೋಯಿತು. ಆ ಈರಜ್ಜಿನ ನೋಡ್ದಾಗ್ಲೆಲ್ಲಾ ತನ್ನ ತಾತ ಹೇಳ್ತಿದ್ದ 'ಅವು'ನ್ನು ದೂರ ಇಡು ಎಂಬ ಮಾತು ನೆನಪಾಗುತ್ತಿತ್ತು. ರುದ್ರಮೂರ್ತಿ ತನ್ನ ಹಳೆಯ ಸಿಟ್ಟನ್ನು ತೀರಿಸಿಕೊಳ್ಳುವಂತೆ ಬೇಗ್ಬೇಗ ಗೌಡನ ಹೆಸರಿಗೆ ಸಾಗುವಳಿ, ಪಹಣಿ, ಸ್ಕೆಚ್‌ಗಳಿಗೆ ಅವಸರ ಮಾಡಲಾರಂಭಿಸಿದ. ಈರಮ್ಮಜ್ಜಿಗೆ ಏನೇನೋ ಸಬೂಬು ಹೇಳಿ ವಾಪಸ್ಸು ಕಳಿಸುವಂತೆ ಪ್ಯೂನ್ ಕರಿಯಪ್ಪನಿಗೆ ಒಪ್ಪಿಸಿದ್ದ.

ವಾರ ತಿಂಗಳಾದರೂ ಈರಜ್ಜಿಯ ಕೆಲಸ ಏನೂ ಆಗದಿದ್ದುದು ನೋಡಿ ತಾಳ್ಮೆಯನ್ನು ಕಳೆದುಕೊಂಡ ಕಾಂತನೇ ರುದ್ರಮೂರ್ತಿನ ಬಳಿ ಹೋಗಿ, 'ಅದ್ಯಾಕ್ರಿ ಆ ಮುದ್ಕಿಗೆ ಅಷ್ಟೊಂದು ಹಿಂಸೆ ಕೊಡ್ತೀರಿ. ನಿಮ್ ಕೈಲಿ ಆಗ್ದಿದ್ರೆ ನನ್ನಕಡೆ ಕೊಡ್ರಿ. ನಾನು ಪುಟಪ್ ಮಾಡಿ ಮೂವ್ ಮಾಡ್ತೀನಿ. ಯಾಕಿಂಗೆ ಸತಾಯಿಸ್ತೀರಿ' ಎಂದ. ಅವನ ಮಾತಿಗೆ ರುದ್ರಮೂರ್ತಿ "ಯೇ ಹೋಗ್ರಿ, ನನ್ಕೆಲ್ಸ ನಾನು ಮಾಡ್ತೀನಿ. ನೀವೇನ್ ಹೇಳ್ಕೊಡೋದು. ನಿಮ್ಮಂಥ ದರಿದ್ರೋರ ಹತ್ರ ಹೇಳ್ಸಕೊಳ್ಳೋ ದರ್ದು ನನಗೇನೂ ಬಂದಿಲ್ಲ. ನೀವು ಎಲ್ಲಿರ್ಬೇಕೋ ಅಲ್ಲಿರ್ಬೇಕು. ನಂಗೇ ಹೇಳೋವಷ್ಟು ಹತ್ರುಕ್ಕೆ ಬಂದ್ಬಿಟ್ಟೆ. ನೀನೇ ಏನಾದ್ರೂ ಕಲ್ತೋದಾದ್ರೆ ನನ್ನ ಹತ್ರಕ್ಕೆ ಬಾ. ನಂಗೇ ಹೇಳಕ್ಕೆ ಬಂದುಬಿಟ್ಟೆ. ನಿಂಗೊಬ್ಬನಿಗೆ ಎಲ್ಲ ಗೊತ್ತಿರೋದು. ಎದ್ರುಗಿರೋರ್ಗೆ ಮೂಗು ತೂರ್ಸುದು ಬಿಟ್ಟು ನಿನ್ನ ಕೆಲ್ಸ ನೀನ್ ಮಾಡ್ಕ ಹೋಗ್. ಜಮೀನ್ ಯಾರ್ದಾಗ್ಬೇಕೋ ಅವ್ರಿಗೆ ಆಗುತ್ತೆ. ಅವ್ರ ಪರ ವಯ್ಸಿಕೊಂಡು ಬಂದ್ಬಿಟ್ಟಾವ್ನೆ. ನೀನೂ ಅಂಗೆ, ನಿನ್ನಂಗೆ 'ಅವು ಅಂಗೇ'. ನಿಮ್ಮಂಥೋವು ಏನೋ ಮಹಾ ಓದಿದಿವಿ ಅಂತ ಇಲ್ಲಿ ಬಂದ್ಬಿಟ್ಟು ನಮ್ಮಂಥೋರ್ಗೆ ಹೇಳಕ್ಕೆ ಬತ್ತಿರಾ? ಥೂ ದೂರ ಸರಿ" ಅಂದ್ಬಿಟ್ಟ.

ಅದೆಲ್ಲಿದ್ದವ್ರೋ ಮಾತುಗಳು. ಒಂದು ದಿನವೂ ಮಾತನಾಡದ ಮುಷ್ಠಿ ಇಂದು ಮಾತನಾಡಿದ್ದು ಅವರಮ್ಮ, ಅವರಪ್ಪ, ತಾತ... ಇವರೆಲ್ಲ ಒಟ್ಟಿಗೆ ಮಾತನಾಡುತ್ತಿದ್ದಾರೆ ಎನಿಸಿತು. ಆ ಮುಷ್ಠಿಯ ಮಾತು ಬಹುವಚನದಿಂದ ಏಕವಚನಕ್ಕೆ ತಿರುಗಿದ್ದಲ್ಲದೇ 'ಅವು ಅಂಗೇ' ಅನ್ನೋ ಪದ ಕಾಂತನಿಗೆ ನಖಶಿಖಾಂತ ಸಿಟ್ಟೇರಿ ಕೆರಳಿಸಿಬಿಟ್ಟಿತು. ರೇಗಿ ಎಲ್ಲರೂ ನಿಂತು ನೋಡುತ್ತಿರುವಂತೆ ಹಿಗ್ಗಾಮುಗ್ಗಾ ಬೈದು, ಚಪ್ಪಲಿ ತೋರಿಸಿ ಬಂದಿದ್ದ.



ತನ್ನ ಕುರ್ಚಿಯಲ್ಲಿ ಕೂತರೂ ಸಿಟ್ಟು ಇಳಿದಿರಲಿಲ್ಲ ಕಾಂತನಿಗೆ. ಸಮಾಧಾನ ಮಾಡಿಕೊಳ್ಳಲು ಆಗಲಿಲ್ಲ. ಕದ್ರ ಹೈಸ್ಕೂಲ್ ಓದುತ್ತಿದ್ದಾಗ ಕನ್ನಡದ ಮೇಷ್ಟ್ರೊಬ್ಬರು ಪಾಠ ಮಾಡುತ್ತ ಪಂಪನ ವಿಕ್ರಮಾರ್ಜುನ ವಿಜಯದ ದ್ರೋಣ-ಕರ್ಣರ ಸಂಭಾಷಣೆ ಯಾವತ್ತೂ ನೆನಪಾಗದ್ದು ಅಂದು ನೆನಪಾಯಿತು. ದ್ರೋಣ ಕರ್ಣನಿಗೆ 'ನಿನ್ನ ನಾಲಿಗೆ ನಿನ್ನ ಕುಲವನ್ನು ಹೇಳುತ್ತದೆ' ಎಂದು ಹೇಳಿದಾಗ, ಕರ್ಣ ಆಕ್ರೋಶದಿಂದ ಹೇಳಿದ ಮಾತುಗಳನ್ನು ಆ ಮೇಷ್ಟ್ರು ಅಷ್ಟೇ